Ref.No. 237/2018

MW-1,

ದಿನಾಂಕಃ 07-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. ಪಿ ಎಲ್ ಆರ್ ವಕೀಲರಿಂದಃ

ನಾನು 2 ನೇ ಪಾರ್ಟಿ ಸಂಸ್ಥೆ ಯು ನನಗೆ ನೀಡಿದಂತಹ authorization letter ಅನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುತ್ತೇನೆ. 1 ನೇ ಪಾರ್ಟಿಯನ್ನು ನಮ್ಮ ಸಂಸ್ಥೆಯಿಂದ ಜೆ ಎಸ್ ಎಸ್ ಮೆಡಿಕಲ್ ಕಾಲೇಜಿಗೆ ಸೆಕ್ಯೂರಿಟಿ ಗಾರ್ಡ್ ಆಗಿ ನೇಮಕ ಮಾಡಿದ್ದೆವು . ಸದರಿ ಸಂಸ್ಥೆಯಲ್ಲಿ 240 ದಿನಗಳಿಗಿಂತ ಹೆಚ್ಚು ದಿನ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. 240 ಹೆಚ್ಚು ಕೆಲಸ ಮಾಡಿರುವುದಿಲ್ಲ ಎಂಬುದರ ಬಗ್ಗೆ ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಸಲ್ಲಿಸಿರುವುದಿಲ್ಲ. ಸೆಕ್ಯೂರಿಟಿ ಗಾರ್ಡ್ ನ ಕೆಲಸ ಸಂಸ್ಥೆಗೆ ಬರುವ ಜನರ ಹೆಸರನ್ನು ರಿಜಿಸ್ಟರ್ ನಲ್ಲಿ ನಮೂದಿಸುವುದು. 1 ನೇ ಪಾರ್ಟಿಯವರು ಜೆ ಎಸ್ ಎಸ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿರಬೇಕಾದರೆ ಅವರಿಗೆ ಪ್ರತಿ ತಿಂಗಳು ಸಂಬಳ ಪಾವತಿಸಿರುತ್ತೇವೆ ಎಂದರೆ ಸರಿ . 1 ನೇ ಪಾರ್ಟಿಯವರನ್ನು ನಮ್ಮ ಸಂಸ್ಥೆಯು ಜೆ ಎಸ್ ಎಸ್ ಕಾಲೇಜಿನಲ್ಲಿ ಕೆಲಸಕ್ಕೆ ನಿಯೋಜಿಸಿದ್ದರಿಂದ ಅದು double employment ಆಗುವುದಿಲ್ಲ ಎಂದರೆ ಸರಿ . ಜೆ ಎಸ್ ಎಸ್ ಸಂಸ್ಥೆಯಲ್ಲಿ superior officer ಕಳ್ಳತನ ಮಾಡುತ್ತಿದ್ದ ಬಗ್ಗೆ 1 ನೇ ಪಾರ್ಟಿಯವರು ನಮಗೆ ತಿಳಿಸಿರುತ್ತಾರೆ ಹಾಗೂ ಲಿಖಿತವಾಗಿಯೂ ನೀಡಿರುತ್ತಾರೆ ಎಂದರೆ ಸರಿ . ಆ ಬಗ್ಗೆ 2 ನೇ ಪಾರ್ಟಿ ಸಂಸ್ಥೆ ಯು ಕ್ರಮವನ್ನು ತೆಗೆದುಕೊಂಡಿರುತ್ತದೆ. ಆ ಬಗ್ಗೆ ದಾಖಲಾತಿಗಳನ್ನು ಮುಂದಿನ ದಿನಾಂಕದಂದು ನೀಡುತ್ತೇನೆ. 2 ನೇ ಪಾರ್ಟಿ ಸಂಸ್ಥೆ ಯು 1 ನೇ ಪಾರ್ಟಿ ನೀಡಿದ ದೂರಿನ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಹಾಗೂ 1 ನೇ ಪಾರ್ಟಿಯ superior ಅವರ ಮೇಲೆ ಗಲಾಟೆ ಮಾಡಿ ಜಾತಿ ನಿಂದನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ . ನಾವು ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಇದ್ದುದರಿಂದ 1 ನೇ ಪಾರ್ಟಿಯವರು ನಮ್ಮ ಸಂಸ್ಥೆಯವರ ಮೇಲೆ ದೂರನ್ನು ನೀಡಿರುತ್ತಾರೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಸದರಿ ದೂರನ್ನು 1 ನೇ ಪಾರ್ಟಿಯವರು ಅವರನ್ನು ಜೆ ಆರ್ ಎಸ್ ಫ್ಯಾಂಟಸಿ ಪಾರ್ಕ್ ಗೆ ವರ್ಗಾಯಿಸಿದ ಒಂದು ವರ್ಷದ ನಂತರ ನೀಡಿರುತ್ತಾರೆ ಎಂದು ನುಡಿಯುತ್ತಾರೆ . 1 ನೇ ಪಾರ್ಟಿಯವರು ಪೊಲೀಸ್ ದೂರನ್ನು ನೀಡಿದ್ದರಿಂದ ಅವರನ್ನು ಜೆ ಆರ್ ಎಸ್ ಫ್ಯಾಂಟಸಿ ಪಾರ್ಕ್ ಗೆ ವರ್ಗಾಯಿಸಿರುತ್ತೇವೆ ಎಂದರೆ ಸರಿಯಲ್ಲ . 1 ನೇ ಪಾರ್ಟಿಯವರಿಗೆ ಜೆ ಆರ್ ಎಸ್ ಫ್ಯಾಂಟಸಿ ಪಾರ್ಕ್ ಗೆ ವರ್ಗಾಯಿಸಿದ್ದರಿಂದ ತುಂಬಾ ತೊಂದರೆಯಾಗಿರುತ್ತದೆ ಎಂದರೆ ಸರಿಯಲ್ಲ . 1 ನೇ ಪಾರ್ಟಿಯವರನ್ನು ಜೆ ಎಸ್ ಎಸ್ ಕಾಲೇಜಿನಿಂದ ಜೆ ಆರ್ ಎಸ್ ಫ್ಯಾಂಟಸಿ ಪಾರ್ಕ್ ಗೆ ವರ್ಗಾಯಿಸಿದಾಗ ಅವರು ಇ ಎಸ್ ಐ ರಜೆಯಲ್ಲಿ ಇದ್ದರು ಎಂದರೆ ಸರಿಯಲ್ಲ . ಜೆ ಎಸ್ ಎಸ್ ಕಾಲೇಜಿನಿಂದ ಜೆ ಆರ್ ಎಸ್ ಫ್ಯಾಂಟಸಿ ಪಾರ್ಕ್ ಗೆ ವರ್ಗಾಯಿಸಿರುವುದು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ .

1 ನೇ ಪಾರ್ಟಿಯವರನ್ನು ವರ್ಗಾಯಿಸಿರುವುದರಿಂದ ಅವರಿಗೆ ತೊಂದರೆ ಆಗಿರುತ್ತದೆಯೇ ಹೊರತು ನಮಗೆ ಯಾವುದೇ ರೀತಿಯ ತೊಂದರೆ ಯಾಗಿರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು 1 ನೇ ಪಾರ್ಟಿಯವರು ಜೆ ಎಸ್ ಎಸ್ ಕಾಲೇಜಿನ ಚಂದ್ರಕಾಂತ್ ಎಂಬುವರರ ಮೇಲೆ ಪೋಲೀಸ್ ದೂರನ್ನು ನೀಡಿದ್ದರಿಂದ ಜೆ ಎಸ್ ಎಸ್ ರವರು ನಮ್ಮ ಕಾಂಟ್ರಾಕ್ಟ್ ನ್ನು ನಿಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ . 1 ನೇ ಪಾರ್ಟಿಯವರನ್ನು ಜೆ ಎಸ್ ಎಸ್ ಕಾಲೇಜಿನಿಂದ ವರ್ಗಾವಣೆ ಮಾಡಿದ ನಂತರ ಸದರಿ ಕಾಲೇಜಿಗೆ ನಮ್ಮ ಸಂಸ್ಥೆಯಿಂದ ಯಾವುದೇ ಸೆಕ್ಯೂರಿಟಿ ಗಾರ್ಡ್ ನ್ನು ನೇಮಿಸಿರುವುದಿಲ್ಲ. 1 ನೇ ಪಾರ್ಟಿಯವರನ್ನು ವರ್ಗಯಿಸಿದ ನಂತರ ಜೆ ಎಸ್ ಎಸ್ ಕಾಲೇಜಿನವರೊಂದಿಗೆ ನಮ್ಮ ಕಾಂಟ್ರಾಕ್ಟ್ ಇನ್ನೂ 2 ವರ್ಷ ಮುಂದುವರೆದಿರುತ್ತದೆ ಎಂದರೆ ಸರಿಯಲ್ಲ . 1 ನೇ ಪಾರ್ಟಿಯವರನ್ನು ಜೆ ಎಸ್ ಎಸ್ ಕಾಲೇಜಿನಿಂದ ಜಿ ಆರ್ ಎಸ್ ಫ್ಯಾಂಟಸಿ ಪಾರ್ಕ್ ಗೆ ವರ್ಗಾಯಿಸಿದ್ದು ಕಾನೂನು ಬಾಹಿರವಾಗಿದ್ದರಿಂದ ಸದರಿ ವರ್ಗಾವಣೆಯನ್ನು ರದ್ದುಗೊಳಿಸಿ ಅವರಿಗೆ ಅಲ್ಲಿಂದ ಇಲ್ಲಿಯವರೆಗೆ ಸಂಬಳವನ್ನು ನೀಡಲು ಭಾಧ್ಯಸ್ಥರಾಗಿರುತ್ತೇವೆ ಎಂದರೆ ಸರಿಯಲ್ಲ . 1 ನೇ ಪಾರ್ಟಿಯವರು 2 ನೇ ಪಾರ್ಟಿ ಸಂಸ್ಥೆ ಯ ಮೂಲಕ ಕೆಲಸ ಮಾಡಲು ಸಿದ್ಧರಿರುವುದರಿಂದ ಅವರನ್ನು ಮತ್ತೊಮ್ಮೆ ಕೆಲಸಕ್ಕೆ ತೆಗೆದುಕೊಳ್ಳಲು ನಾವು ಭಾಧ್ಯಸ್ಥರಾಗಿರುತ್ತೇವೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.